# ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ

**ಬೀದಿ ವ್ಯಾಪಾರಿಗಳು, ದಲಿತ, ಮಾನವ ಹಕ್ಕುಗಳ, ಸಾಮಾಜಿಕ ಮತ್ತು ಅಭಿವೃದ್ಧಿ ಸಂಸ್ಥೆಗಳ ಒಕ್ಕೂಟ**

*ನಮ್ಮನ್ನು ಹೊರ ಹಾಕುವುದನ್ನು ನಿಲ್ಲಿಸಿ. ಅವು ಸಂವಿಧಾನ ವಿರೋದಿ ಮತ್ತು ರಾಷ್ಟ್ರೀಯ ಬೀದಿ ವ್ಯಾಪಾರಿಗಳ ನೀತಿಗೆ ವಿರೋಧ್ಧವಾದುದ್ದು.*

*ಸಮಾಜಕ್ಕೆ ನಮ್ಮ ಕೊಡುಗೆಯನ್ನು ಗೌರವಿಸಲು. ನಮ್ಮ ಮೂಲಭೂತ ಹಕ್ಕುಗಳನ್ನು ಗೌರವಿಸಲು. ಕಾನೂನು ಮತ್ತು ಸಾಮಾಜಿಕ ರಕ್ಷಣೆಗಾಗಿ ಆಗ್ರಹಿಸುತ್ತೇವೆ.*

## ದಿನಾಂಕ:-ಸೋಮವಾರ, ನವೆಂಬರ್ ೨೨, ಸಮಯ:೧೧.೦೦ ಗಂಟೆಗೆ,

## ಸ್ಥಳ:- ಬಿ.ಬಿ.ಎಂ.ಪಿ. ಮುಖ್ಯ ಕಛೇರಿಯಲ್ಲಿ ಧರಣಿ

ಕಳೆದ ಕೆಲವು ತಿಂಗಳುಗಳಿಂದ ಬಿ.ಬಿ.ಎಂ.ಪಿ. ಪೋಲಿಸ್ ಹಾಗು ಮುಜಾರಾಯಿ ಇಲಾಖೆಗಳು ಯಾವುದೇ ಮುನ್ಸೂಚನೆ ನೀಡದೇ ಅಥವಾ ನಮಗೆ ಜೀವನೋಪಾಯಕ್ಕಾಗಿ ಬದಲೀ ಸ್ಥಳಗಳನ್ನು ನೀಡದೇ, ಶಿವಾಜಿನಗರ, ಜಯನಗರ, ಅಲಸೂರು ಮತ್ತು ಗಾಂಧೀನಗರಗಳಲ್ಲಿನ ಬೀದಿಗಳಿಂದ ಆಕ್ರಮಣಕಾರಿಯಾಗಿ ಮತ್ತು ಬಲಾತ್ಕಾರದಿಂದ ನಮ್ಮನ್ನು ಹೊರದೂಡೀರುತ್ತಾರೆ. ಇದರಿಂದ ಬದುಕುವ ಆದಾಯ ಮೂಲಗಳಿಂದ ವಂಚಿತವಾಗಿರುವ ನಮ್ಮ ಕುಟುಂಬಗಳು ಬದುಕಲು ದಾರಿ ಕಾಣದಂತಾಗಿದೆ. ನಮ್ಮ ಕುಟುಂಬಗಳು ಸೂರಿಲ್ಲದೇ, ಜೀವನಾಧಾರವಿಲ್ಲದಂತಾದವು, ನಮ್ಮ ಮಕ್ಕಳು ಶಾಲೆ ಬಿಡುವಂತಾದವು ಮತ್ತು ನಾವಿಂದು ಒಂದು ಹೊತ್ತಿನ ಊಟಕ್ಕಾಗಿಯೂ ಸಹ ಪರದಾಡುವಂತಾಗಿದೆ.

ಜುಲೈ ತಿಂಗಳಿಂದ ನಾವು ಸ್ಥಳೀಯ ಪೋಲಿಸ್ ಠಾಣೆಗೆ, ಸ್ಥಳೀಯ ಎ.ಸಿ.ಪಿ ಕಚೇರಿಗೆ, ಸ್ಥಳೀಯ ಬಿ.ಬಿ.ಎಂ.ಪಿ ಕಚೇರಿಗಳಿಗೆ ಅನೇಕ ಬಾರಿ ಹೋಗಿ, ಅಧಿಕಾರಿಗಳನ್ನು ಬೇಟಿಯಾದ ಮೇಲೂ ನಮಗೆ ನಮ್ಮ ಹಿಂದಿನ ಸ್ಥಳದಲ್ಲೇ ಪುನಃ ವ್ಯಾಪರ ಮಾಡಲು ಅನುಮತಿ ದೋರೆಯಲಿಲ್ಲ. ಬೇರೆ ದಾರಿಯಿಲ್ಲದೆ ನಾವು ನಮ್ಮ ಹಕ್ಕುಗಳಿಗೆ ಒತ್ತಾಯಿಸಿ ಅಕ್ಟೋಬರ್ ೨೧ ರಂದು ಬಿ.ಬಿ.ಎಂ.ಪಿಯ ಕಚೇರಿಯಲ್ಲಿ ಧರಣಿ ಕುಳಿತೆವು. ಆ ದಿವಸ ಮಾನ್ಯ ಮಹಾ ಪೌರರು ಹಾಗು ವಿರೋಧ ಪಕ್ಷದ ನಾಯಕರು ಬಂದು ನಮನ್ನು ಬೇಟಿಯಾದರು. ಮಹಾಪೌರರು ಬೀದಿ ವ್ಯಾಪರಿಗಳಿಗೆ ಬೆಂಬಲ ಕೊಡುವುದಾಗಿ ಹೇಳಿ, ನಮ್ಮ ಹಕ್ಕೊತಾಯಗಳನ್ನು ಪೂರೈಸಲು ಬಿ.ಬಿ.ಎಂ.ಪಿ ಆಯುಕ್ತರೊಡನೆ ಸಭೆಯೊಂದನ್ನು ಕರೆಯುವುದಾಗಿ ಆಶ್ವಾಸನೆ ನೀಡಿದರು. ಅಕ್ಟೋಬರ್ ೨೮ರೊಳಗೆ ಈ ಸಭೆಗೆ ತಾರಿಕನ್ನು ತೀರ್ಮಾನಿಸುವುದಾಗಿ ಭರವಸೆ ನೀಡಿದರು.

ಇದಾದ ನಂತರ ಈ ವಿಷಯವಾಗಿ ನಾವು ಹಲವು ಭಾರಿ ಮಹಾಪೌರರ ಕಚೇರಿಗೆ ಮತ್ತು ಆಯುಕ್ತರ ಕಚೇರಿಗೆ ಬೇಟಿ ನೀಡಿದೆವು. ಆದರೆ ಈವರೆಗೂ ನಮ್ಮ ಹಕ್ಕೋತ್ತಾಯಗಳನ್ನು ಚರ್ಚಿಸಲು ಸಭೆಯನ್ನು ಕರೆದಿಲ್ಲ, ಆ ಸಭೆಗೆ ತಾರೀಖನ್ನು ತೀರ್ಮಾನಿಸಿಲ್ಲ. ನಾವು ಈ ಪ್ರತಿಭಟನೆಗೆ ಕೂತು ಒಂದು ತಿಂಗಳು ಆಗುತ್ತಾ ಬಂದಿದೆ. ನಮಗೆ ಜುಲೈ ತಿಂಗಳಿಂದ ಆದಾಯವಿಲ್ಲ. ನಾವು ಇಷ್ಟು ಕಷ್ಟದಲ್ಲಿದ್ದರೂ ಮಹಾಪೌರರು ಇದರ ಬಗ್ಗೆ ಗ್ವಮನ ಕೊಡದೆ ಅವರ ಮಾತನ್ನು ಉಳಿಸಿಕೊಂಡಿಲ್ಲ. ಹಾಗಾಗಿ, ಬೇರೆ ದಾರಿಯಿಲ್ಲದೆ, ನಾವು ನವೆಂಬರ್ ೨೨ ರಂದು ಬಿ.ಬಿ.ಎಂ.ಪಿ ಕಚೇರಿಯಲ್ಲಿ ಸೇರಿ, ನಮ್ಮ ಹಕ್ಕೋತ್ತಾಯಗಳನ್ನು ಮಹಾಪೌರರು ಪೂರೈಸುವ ವರೆಗು ಅಲ್ಲೇ ಇರಲು ನಿರ್ಧರಿಸಿದ್ದೇವೆ.

ನಮ್ಮ ಹಕ್ಕೋತ್ತಾಯಗಳು-

1. ಈವರೆಗೆ ತೆರವುಗೊಳಿಸಿದ ಎಲ್ಲಾ ಬೀದಿ ವ್ಯಾಪಾರಿಗಳನ್ನು ನಮ್ಮ ಹಿಂದಿನ ಸ್ಥಳದಲ್ಲೇ ಪುನಃ ವ್ಯಾಪರ ಮಾಡಲು ಅನುವು ಮಾಡಿಕೊಡಬೇಕು. ವ್ಯಾಪಾರ ಮಾಡಲು ಸಹಾಯಾವಾಗುವಂತೆ ಪ್ರತಿಯೊಬ್ಬರಿಗೂ ೧ X ೧ ಮೀಟರ್ ಅಳತೆಯ ಸ್ಥಳವನ್ನು ಫುಟ್ ಪಾತ್‌ನ ಕೊನೆಯಲ್ಲಿ ಕೊಡಬೇಕು.
2. ಬಿ.ಬಿ.ಎಂ.ಪಿ.ಯು ನಮ್ಮ ಸಂವಿಧಾನ, ಸರ್ವೋಚ್ಚ ನ್ಯಾಯಾಲಯ, ನಗರದ ಬೀದಿ ವ್ಯಾಪಾರಿಗಳ ರಾಷ್ಟ್ರೀಯ ನೀತಿ ೨೦೦೯ಕ್ಕೆ ಅನುಗುಣವಾಗಿ ಅದರ ಬೀದಿ ವ್ಯಾಪಾರದ ಕುರಿತಾದ ಯೋಜನೆಗಳನ್ನು ರೂಪಿಸಬೇಕು.

೩. ಬಿ.ಬಿ.ಎಂ.ಪಿ.ಯು. ಕಾನೂನು ಪ್ರಕ್ರಿಯೆಯನ್ನು ಅನುಸರಿಸದೇ ಯಾವುದೇ ಎತ್ತಂಗಡಿಯನ್ನು ಮಾಡಬಾರದು. ವ್ಯಾಪಾರಿಗಳ ವಿರುದ್ಧದ ದೌರ್ಜನ್ಯವನ್ನು ಕೂಡಲೇ ನಿಲ್ಲಿಸಬೇಕು. ಸೌಂದರ್ಯೀಕರಣದ ಹೆಸರಿನಲ್ಲಿ, ಬಿ.ಬಿ.ಎಂ.ಪಿ.ಯು ಯಾವುದೇ ವ್ಯಾಪಾರಿಗಳನ್ನು ಬೆಂಗಳೂರಿನಲ್ಲಿ ಎಲ್ಲಿಯೂ ಖಾಲಿಮಾಡಬಾರದು.

**ತಾವೆಲ್ಲರು ಬನ್ನಿ, ಬೀದಿ ವ್ಯಾಪಾರಿಗಳ ಆಂದೋಲನವನ್ನು ಬಲಪದಿಸಲು ದಯುವಿಟ್ಟು ತಮ್ಮ ಬೆಂಬಲವನ್ನು ನೀಡಿ.**

#122/4 , Infantry Road, Opp. Infantry Wedding Hall, Bangalore – 1. Ph: 9880595032, 9448411863,9986777521